**<u>ದಿನಾಂಕಃ 02-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ವಿ.ವಿ.ಎಸ್. ಆರೋಪಿ ನಂ. 2 ರಿಂದ 8, 11,12,13 ರಿಂದ 16, 18 ರಿಂದ 29, 31 ರಿಂದ 36, 38,39,41 ರಿಂದ 45, 47 ರಿಂದ 55, 57 ರಿಂದ 60 ಮತ್ತು 62 ರಿಂದ 64 ರವರ ಪರ ವಕೀಲರಿಂದಃ</u>**

**1.** ನನ್ನ ಉದ್ಯೋಗ ನಿವೃತ್ತ ನೌಕರ ಹಾಗೂ ಧರ್ಮಾಚರಣೆ ಇರುತ್ತದೆ. ಉದರ ಪೋಷಣೆ ಕುರಿತು ಧರ್ಮಾಚರಣೆ ಮಾಡುತ್ತೇನೆ ಅಂದರೆ ತಪ್ಪು. ನಾನು ಸಲ್ಲಿಸಿದ ದೂರಿನಲ್ಲಿ ನನ್ನ ಉದ್ಯೋಗ ಧರ್ಮಾಚರಣೆ ಹಾಗೂ ಸಮಾಜ ಸೇವೆ ಅಂತಾ ಬರೆಸಿರುತ್ತೇನೆ ಅಂದರೆ ಸರಿ. ಸಾಮಾನ್ಯವಾಗಿ ಉದ್ಯೋಗವೆಂದರೆ ಒಬ್ಬ ವ್ಯಕ್ತಿಯ ಉಪಜೀವನಕ್ಕೆ ನಡೆಸುವ ಕೆಲಸವಾಗಿರುತ್ತದೆ ಅಂದರೆ ಸುಳ್ಳು. ಫಿರ್ಯಾದಿ ತಯಾರಿಸಲು ವಕೀಲರಿಗೆ ನಾನು ಮಾಹಿತಿ ನೀಡಿರುತ್ತೇನೆ.

**2.** ನನಗೆ 4 ಜನ ಮಕ್ಕಳು. ನನಗೆ 2 ವಿವಾಹಗಳು ಆಗಿರುತ್ತವೆ. ನನಗೆ ಮೊದಲ ಹೆಂಡತಿಯಿಂದ ಇಬ್ಬರೂ ಮಕ್ಕಳಿದ್ದು, ಅವರೆಂದರೆ ಪರಮೇಶ್ವರಯ್ಯ ಸ್ವಾಮಿ ಉರ್ಫ ಗುರುಶಾಂತಸ್ವಾಮಿ, ಅಭಿಷೇಕ. ಪರಮೇಶ್ವರಯ್ಯಸ್ವಾಮಿ ಇತನ ಶಾಲಾ ದಾಖಲಾತಿಯಲ್ಲಿ ಆತನ ಹೆಸರು ಪರಮೇಶ್ವರಯ್ಯಸ್ವಾಮಿ ಅಂತಾ ಇರುತ್ತದೆ. ನನಗೆ 2 ನೇ ಹೆಂಡತಿಯಿಂದ ಇಬ್ಬರೂ ಮಕ್ಕಳು ಇರುತ್ತಾರೆ. ನನ್ನ 2 ನೇ ಹೆಂಡತಿ ಇರುತ್ತಾರೆ. ನನ್ನ 2 ನೇ ಹೆಂಡತಿ ರಾಣೇಬೆನ್ನೂರನಲ್ಲಿ ವಾಸವಿರುತ್ತಾರೆ. ನಾನು ನೆಗಳೂರ ಹಾಗೂ ರಾಣೇಬೆನ್ನೂರ ಎರಡು ಕಡೆಗೆ ವಾಸ ಮಾಡುತ್ತೇನೆ. ನಾನು 20 ವರ್ಷಗಳಿಂದ ರಾಣೇಬೆನ್ನೂರನಲ್ಲಿ ವಾಸವಿರುತ್ತೇನೆ. ನಾನು ರಾಣೇಬೆನ್ನೂರಿನ ಉಮಾಶಂಕರ ನಗರ, 1 ನೇ ಮೇನ್, ಎ ಕ್ರಾಸ್‌ನಲ್ಲಿ ವಾಸವಿರುತ್ತೇನೆ. ನಾನು ಹಿರೇಮಠ ಸಭಾಭವನದಲ್ಲಿ ವಾಸವಿರುತ್ತೇನೆ ಅಂದರೆ ಸರಿ. ಹಿರೇಮಠ ಸಭಾಭವನ ಹಾಗೂ ಲಕ್ಷ್ಮೀ ಮಂದಿರ ಎರಡು ಒಂದೇ ಅಂದರೆ ಸರಿ. 2010 ರಲ್ಲಿ ನಾನು ಹಿರೇಮಠ ಸಭಾಭವನ ಹಾಗೂ ಲಕ್ಷ್ಮೀ ಮಂದಿರ

ಕಟ್ಟಿಸಿರುತ್ತೇನೆ. 2000 ನೇ ಇಸ್ವಿಯಲ್ಲಿ ನಾನು ಲಕ್ಷ್ಮೀ ಮಂದಿರ ಸ್ಥಾಪಿಸಿರುತ್ತೇನೆ. ನನ್ನ ಮಗ ಪರಮೇಶ್ವರಯ್ಯ ಈತ ನೆಗಳೂರಿನಲ್ಲಿ, ರಾಣೇಬೆನ್ನೂರಿನಲ್ಲಿ ವಾಸವಿರುತ್ತಾನೆ ಹಾಗೂ ಭಕ್ತರ ಮನೆಗೂ ಸಹ ಹೋಗುತ್ತಾನೆ.

**3.** ಹಿರೇಮಠ ಅಂದರೆ ನೆಗಳೂರಿನಲ್ಲಿರುವ ಹಿರೇಮಠ ಮನೆತನದ ಶಾಖೆ ಅಂದರೆ ಸರಿ. ನೆಗಳೂರಿನಲ್ಲಿ ಗುರುಶಾಂತೇಶ್ವರ ಹಿರೇಮಠ ಇದೆ ಅಂದರೆ ಸರಿ. ಗುರುಶಾಂತೇಶ್ವರ ಹಿರೇಮಠದ ಫೀಠಾಧಿಕಾರಿಗಳು ನಾನು ಹಾಗೂ ನನ್ನ ಮಗ ಇರುತ್ತೇವೆ ಅಂತಾ ನಿರ್ಧರಿಸುವ ಕುರಿತು ದಾವೆ ದಾಖಲಿಸಿರುತ್ತೇವೆ ಅಂದರೆ ಸರಿ. ಅದರ ನಂಬರ ಮೊದಲು 208/2007 ಅಂತಾ ಇದ್ದು ಈಗ ಅದು 51/2018 ಅಂತಾ ಇದೆ ನ್ಯಾಯಾಲಯದಲ್ಲಿ ಇರುತ್ತದೆ. ಗುರುಶಾಂತೇಶ್ವರ ಮಠವೂ ಬಾಂಬೆ ಪಬ್ಲಿಕ್ ಟ್ರಸ್ಟ ಆ್ಯಕ್ಟ ಅಡಿಯಲ್ಲಿ ನೋಂದಣಿಯಾಗಿರುತ್ತದೆ.

**4.** ನಾನು ಅಂಚೆ ಇಲಾಖೆಯಲ್ಲಿ ಗ್ರಾಮೀಣ ಅಂಚೆ ನೌಕರ ಅಂತಾ ಕೆಲಸ ಮಾಡುತ್ತಿದ್ದೆ. 1987 ರಿಂದ 2011 ರವರೆಗೆ ನಾನು ಅಂಚೆ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ನಾನು ನಿವೃತ್ತಿಯಾಗುವ ಕಾಲಕ್ಕೆ ರಾಣೇಬೆನ್ನೂರ ಮುಖ್ಯ ಅಂಚೆ ಕಛೇರಿಯಲ್ಲಿ ಗ್ರಾಮೀಣ ಅಂಚೆ ನೌಕರ ಅಂತಾ ಕೆಲಸ ಮಾಡುತ್ತಿದ್ದೆ. ದಿನಾಂಕಃ 05-02-2011 ರಂದು ನಾನು ಸೇವಾ ನಿವೃತ್ತನಾಗಿರುತ್ತೇನೆ.

**5**. ಗುರುಶಾಂತೇಶ್ವರ ಹಿರೇಮಠಕ್ಕೆ ಮೊದಲು ಶಿವಾನಂದ ಸ್ವಾಮಿಗಳು ಫೀಠಾಧಿಕಾರಿಗಳು ಆಗಿದ್ದರು ಅಂದರೆ ಸರಿ. ಅವರು ದಿನಾಂಕಃ 01-09-2007 ರಲ್ಲಿ ಮೃತಪಟ್ಟಿರುತ್ತಾರೆ. ಸದರಿ ಶಿವಾನಂದ ಸ್ವಾಮಿಗಳು ಮೃತಪಟ್ಟ ನಂತರ ನಾನು ಹಾಗೂ ನನ್ನ ಮಗ ದಾವೆ ಸಲ್ಲಿಸಿರುತ್ತೇವೆ ಅಂದರೆ ಸರಿ.

**6.** ನಾನು ದಾಖಲಿಸಿದ ದಾವೆಯಲ್ಲಿ ಈ ಪ್ರಕರಣದ 4 ನೇ ಆರೋಪಿ ಪ್ರತಿವಾದಿಯಾಗಿರುತ್ತಾರೆ ಅಂದರೆ ಸರಿ. ಸದರಿ ದಾವೆಯಲ್ಲಿ 4 ನೇ ಆರೋಪಿಯ ಅ.ಸ.ದಾರ ಅಂತಾ ಈ ಪ್ರಕರಣದ 2 ನೇ ಆರೋಪಿಯಾದ ಗದಿಗಯ್ಯ ಸ್ವಾಮಿ ಇವರನ್ನು ತೋರಿಸಿದ್ದೆ ಅಂದರೆ ಸರಿ. ನಾನು ದಾವೆ ಸಲ್ಲಿಸುವ ಕಾಲಕ್ಕೆ ನನ್ನ ಮಗ

ಹಾಗೂ ಪ್ರಸ್ತುತ ಪ್ರಕರಣದ 4 ನೇ ಆರೋಪಿ ಅಲ್ಪವಯಸ್ಕರು ಆಗಿದ್ದರು ಅಂದರೆ ಸರಿ. ದಾವೆ ಸಲ್ಲಿಸುವ ಕಾಲಕ್ಕೆ ನನ್ನ ಮಗನಿಗೆ ಹಾಗೂ ಈ ಪ್ರಕರಣದ 4 ನೇ ಆರೋಪಿಗೆ 16 ವರ್ಷ ವಯಸ್ಸು ಆಗಿತ್ತು ಅಂದರೆ ಸಾಕ್ಷಿ ಇರಬಹುದು ಅಂತಾ ಹೇಳುತ್ತಾರೆ. ಈಗ ನನಗೆ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ಮಗನ ಹಾಗೂ 4 ನೇ ಆರೋಪಿಯ ವಯಸ್ಸು ನಿಖರವಾಗಿ ಎಷ್ಟು ಇತ್ತು ಅಂತಾ ನೆನಪಿಲ್ಲ. ನನಗೆ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ಮಗನ ಹಾಗೂ 4 ನೇ ಆರೋಪಿಯ ವಯಸ್ಸು ಗೊತ್ತಿತ್ತು.

**7.** ನನ್ನ ದೂರಿನ 1 ನೇ ಕಂಡಿಕೆಯಲ್ಲಿ ಬರೆದಂತೆ ದಿನಾಂಕಃ 04-09-2007 ರಂದು ನನ್ನ ಮಗನ ಫೀಠಾಧಿಕಾರಿ ಅಂತಾ ನೇಮಿಸುವ ಪ್ರಕ್ರಿಯೆ ನೆಗಳೂರ ಗ್ರಾಮದಲ್ಲಿ ನಡೆದಿರುತ್ತದೆ.

**8.** ದಾವಾ ನಂಬರ 51/2018 ರಲ್ಲಿ ನನ್ನ ಮಗನ ಫೀಠಾಧಿಕಾರಿ ಕಾರ್ಯಕ್ರಮ ರಾಣೇಬೆನ್ನೂರಿನ ಹಿರೇಮಠದಲ್ಲಿ ನಡೆದಿರುತ್ತದೆ ಅಂತಾ ದಾಖಲೆ ಹಾಜರಪಡಿಸಿರುತ್ತೇನೆ ಅಂದರೆ ಸಾಕ್ಷಿ ಕೆಲವೊಂದು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಈಗ ನೆನಪಿಲ್ಲ ಅಂತಾ ಹೇಳುತ್ತಾರೆ. ನಾನು ಹಾಜರಪಡಿಸಿದ ದಾಖಲೆಗಳಲ್ಲಿ ನನ್ನ ಮಗನ ಫೀಠಾಧಿಕಾರಿ ಕಾರ್ಯಕ್ರಮ ರಾಣೇಬೆನ್ನೂರಿನಲ್ಲಿಯೇ ನಡೆದಿರುತ್ತದೆ ಅಂತಾ ಇರುತ್ತದೆ ಅಂದರೆ ಸಾಕ್ಷಿ ನೆನಪಿಲ್ಲ ಅಂತಾ ಹೇಳುತ್ತಾರೆ. ನನ್ನ ಪ್ರಕಾರ ನನ್ನ ಮಗನ ಫೀಠಾಧಿಕಾರಿ ಕಾರ್ಯಕ್ರಮ ನೆಗಳೂರಿನಲ್ಲಿ ನಡೆದಿದ್ದು, ಅದರ ಮುಂದುವರೆದ ಧಾರ್ಮಿಕ ಕಾರ್ಯಕ್ರಮಗಳು ರಾಣೇಬೆನ್ನೂರಿನಲ್ಲಿ ನಡೆದಿರುತ್ತೇವೆ. ನೆಗಳೂರನಲ್ಲಿ ಫೀಠಾಧಿಕಾರಿ ಕಾರ್ಯಕ್ರಮ ನಡೆದ ಬಗ್ಗೆ ದಾಖಲೆಗಳು ಇರುವುದಿಲ್ಲ ಅಂದರೆ ಸುಳ್ಳು. ಆ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಅವುಗಳನ್ನು ನಾನು ಶ್ರೀ ಎಸ್.ಸಿ. ಶಿಡೇನೂರ, ವಕೀಲರಿಗೆ ನೀಡಿರುತ್ತೇನೆ. ಅವು ಯಾವವು ಅಂತಾ ನೆನಪಿಲ್ಲ. ಯಾವ ದಾಖಲೆಗಳನ್ನು ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ಅವುಗಳ ಹೆಸರು ಸಹ ನೆನಪಿಲ್ಲವೇ? ಅಂದರೆ ಸಾಕ್ಷಿ ಈಗ ನೆನಪಿಲ್ಲ ಅಂತಾ ಹೇಳುತ್ತಾರೆ.

**9.** ಮೂಲ ದಾವಾ ನಂಬರ 208/2007 ರಲ್ಲಿ ನಾನು ಹಾಜರಪಡಿಸಿದ ದಾಖಲೆಗಳನ್ನು ನೋಡಿಲ್ಲ. ಅದೇ ರೀತಿ ಪ್ರತಿವಾದಿಯರು ದಾಖಲಿಸಿದ ದಾಖಲೆಗಳನ್ನು ನೋಡಿದ ಬಗ್ಗೆ ನೆನಪಿಲ್ಲ. ಓ.ಎಸ್. ನಂ. 208/2007 ರಲ್ಲಿ ಮಧ್ಯಂತರ ಅರ್ಜಿ ನಂಬರ -1 ನ್ನು ಸಲ್ಲಿಸಿ, ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧ ಆಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದೆ ಅಂದರೆ ಸರಿ. ನಾನು ಸಲ್ಲಿಸಿದ ಸದರಿ ಮಧ್ಯಂತರ ಅರ್ಜಿ-1 ವಜಾ ಆಗಿರುತ್ತದೆ. ಸದರಿ ಮಧ್ಯಂತರ ಅರ್ಜಿಯ ಮೇಲೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ನೆನಪಿಲ್ಲ. 2008 ರಲ್ಲಿ ನಾನು ಹಾನಗಲ್ ಹಿರಿಯ ದಿವಾಣಿ ನ್ಯಾಯಾಲಯಕ್ಕೆ ಹೋಗಿರುತ್ತೇನೆ. ಈ ಪ್ರಕರಣವು ಹಾನಗಲ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದೆ ಅಂತಾ ನಮ್ಮ ವಕೀಲರು ತಿಳಿಸಿದ್ದರಿಂದ ನಾನು ಅಲ್ಲಿಗೆ ಹೋಗಿದ್ದೆ. ಸದರಿ ಪ್ರಕರಣದಲ್ಲಿ ನಾನು ಅರ್ಜಿ ವಗೈರೆ ಸಲ್ಲಿಸಿದ ಬಗ್ಗೆ ನೆನಪಿಲ್ಲ. ಹಾನಗಲ್ ನ್ಯಾಯಾಲಯದಲ್ಲಿದ್ದ ಪ್ರಕರಣ ಈಗ ವಜಾ ಆಗಿರುತ್ತದೆ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಬಗ್ಗೆ ಈಗ ನೆನಪಿಲ್ಲ. 2018 ರಲ್ಲಿ ಪ್ರಕರಣವು ಈ ನ್ಯಾಯಾಲಯಕ್ಕೆ ಬಂದಿರುತ್ತದೆ.

**10.** ನನ್ನ ಮಾನಸಿಕ ಸ್ಥಿತಿ ಚೆನ್ನಾಗಿರುತ್ತದೆ, ನಾನು ನನ್ನ ಮಾನಸಿಕ ಆರೋಗ್ಯದ ಕುರಿತು ಯಾವುದೇ ಔಷದೋಪಚಾರ ತೆಗೆದುಕೊಳ್ಳುತ್ತಿಲ್ಲ. ಅಸಲು ದಾವೆಯಲ್ಲಿ ಸಿ.ಡಿ.ಯ ನಕಲನ್ನು ಪೂರೈಸುವಂತೆ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ನೆನಪಿಲ್ಲ. ನಾನು ನೀಡಿದ ಅರ್ಜಿಯನ್ನು ನ್ಯಾಯಾಲಯ ತಳ್ಳಿಹಾಕಿದ್ದು, ಅದರ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ಸಲ್ಲಿಸಿದ್ದೆ ಅಂದರೆ ನೆನಪಿಲ್ಲ. ಅದೇ ರೀತಿ ಹಾನಗಲ್ ನ್ಯಾಯಾಲಯದಲ್ಲಿರುವ ಪ್ರಕರಣದಲ್ಲಿ ಸಹ ಸಿ.ಡಿ. ಪೂರೈಸುವಂತೆ ಅರ್ಜಿ ನೀಡಿದ್ದೆ ಅಂದರೆ ನೆನಪಿಲ್ಲ. ನಾನು ಅಸಲು ದಾವೆಯ ಕುರಿತು ಒಟ್ಟು ಎಷ್ಟು ಭಾರಿ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅರ್ಜಿಗಳನ್ನು ಹಾಗೂ ಮೇಲ್ಮನವಿಗಳನ್ನು ಸಲ್ಲಿಸಿರುತ್ತೇನೆ ಅಂತಾ ನೆನಪಿಲ್ಲ. ಅಸಲು ದಾವಾ ನಂಬರ 51/2018 ರಲ್ಲಿ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂಬ ವಿಷಯ

ನನಗೆ ನೆನಪಿರುತ್ತದೆ. ಸದರಿ ಮುಖ್ಯ ವಿಚಾರಣೆಯಲ್ಲಿ ನನ್ನ ಮಗನ ಪೀಠಾಧಿಕಾರಿ ಕಾರ್ಯಕ್ರಮ ಎಲ್ಲಿ ನಡೆದಿದೆ ಅಂತಾ ಬರೆಸಿರುತ್ತೇನೆ ಅಂತಾ ನೆನಪಿಲ್ಲ. ಉತ್ತರ ಹೇಳಿದರೆ ನಿಜವಾದ ಸಂಗತಿಗಳು ಹೊರಬರುತ್ತವೆ ಅಂತಾ ಎಲ್ಲಾ ಪ್ರಶ್ನೆಗಳಿಗೆ ನೆನಪಿಲ್ಲ ಅಂತಾ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**11.** ಶಿವಾನಂದ ಸ್ವಾಮಿಗಳು ತಮ್ಮ ಜೀವಿತ ಅವಧಿಯಲ್ಲಿ ನನ್ನ ಮಗನನ್ನು ಮುಂದಿನ ಫೀಠಾಧಿಕಾರಿ ಅಂತಾ ನೇಮಿಸಿರಲಿಲ್ಲ ಅಂತಾ ಹೇಳುವುದು ಸುಳ್ಳು. ಆ ರೀತಿ ನನ್ನ ಮಗನನ್ನು ನೇಮಿಸಿದ ಬಗ್ಗೆ ದಾಖಲಾತಿಗಳು ಇರುತ್ತವೆ. ಆ ಬಗ್ಗೆ ನಾನು ದಾಖಲೆಗಳನ್ನು ವಕೀಲರಿಗೆ ನೀಡಿರುತ್ತೇನೆ. ನಾನು ನನ್ನ ಮಗನನ್ನು ಶಿವಾನಂದ ಸ್ವಾಮಿಗಳು ತಮ್ಮ ಜೀವಿತಅವಧಿಯಲ್ಲಿ ಮುಂದಿನ ಫೀಠಾದಿಕಾರಿ ಅಂತಾ ನೇಮಿಸಿದ ಕುರಿತು ಯಾವ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ ಅಂತಾ ನೆನಪಿಲ್ಲ. ನಿಯೋಜನೆ ಮಾಡಿದ ಬಗ್ಗೆ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಆ ರೀತಿ ದಾಖಲೆಗಳನ್ನು ಚಾರಟಿ ಕಮೀಷನ್‌ರ ಇವರಿಗೆ ನೀಡುವಂತೆ ಶಿವಾನಂದಸ್ವಾಮಿಗಳು ಹೇಳಿದ ಬಗ್ಗೆ ನನಗೆ ನೆನಪಿರುತ್ತದೆ. ಶಿವಾನಂದ ಸ್ವಾಮಿಗಳು ತಮ್ಮ ಜೀವಿತ ಅವಧಿಯಲ್ಲಿ ನನ್ನ ಮಗನನ್ನು ಮುಂದಿನ ಪೀಠಾಧಿಕಾರಿ ಅಂತಾ ನೇಮಿಸಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಅದನ್ನು ನಾನು ಹುಟ್ಟಿಸಿ ಹೇಳುತ್ತಿದ್ದೇನೆ ಅಂದರೆ ಸುಳ್ಳು. ಶಿವಾನಂದ ಸ್ವಾಮಿಗಳು ತಮ್ಮ ಜೀವಿತ ಅವಧಿಯಲ್ಲಿ ಬಾಳೇಹೊನ್ನೂರ ಸ್ವಾಮಿಗಳ ಸಮಕ್ಷಮದಲ್ಲಿ ಪ್ರಸ್ತುತ ಪ್ರಕರಣದ 4 ನೇ ಆರೋಪಿಯನ್ನು ಮುಂದಿನ ಫೀಠಾಧಿಕಾರಿ ಅಂತಾ ನೇಮಿಸಿದ್ದರು ಅಂದರೆ ಸುಳ್ಳು. ಆ ಬಗ್ಗೆ ಸ್ವಾಮಿಗಳು ಒಂದು ಮೃತ್ಯು ಪತ್ರ ಸಹ ಬರೆದಿರುತ್ತಾರೆ ಅಂದರೆ ಸುಳ್ಳು. ಸದರಿ ಮೃತ್ಯು ಪತ್ರವನ್ನು ಪ್ರತಿವಾದಿ ಅಸಲು ದಾವೆಯಲ್ಲಿ ಹಾಜರಪಡಿಸಿರುತ್ತಾರೆ ಅಂದರೆ ಸರಿ. ನೆಗಳೂರು ಗುರುಶಾಂತೇಶ್ವರ ಹಿರೇಮಠದ ಪುತ್ರವರ್ಗ ಪದ್ಧತಿಯಂತೆ ಹಿಂದಿನ ಸ್ವಾಮಿಗಳ ನಿಯೋಜನಾ ಪ್ರಕಾರ, ಪ್ರಸ್ತುತ

ಪ್ರಕರಣದ 4 ನೇ ಆರೋಪಿಯನ್ನು ನೆಗಳೂರ ಮಠದ ಫೀಠಾಧಿಕಾರಿ ಅಂತಾ ಮಾಡಿರುತ್ತಾರೆ ಅಂದರೆ ಸುಳ್ಳು.

**12.** ನಿಪಿ-24 ಇದು ಜೆರಾಕ್ಸ ಪ್ರತಿಯ ದೃಢೀಕೃತ ನಕಲು ಇರುತ್ತದೆ ಅಂದರೆ ಸರಿ. ನಿಪಿ-24 ರ ದಾಖಲೆಯಲ್ಲಿ ಎರಡು ಪುಟಗಳು ಇರುತ್ತವೆ ಅಂದರೆ ಸರಿ. ನಿಪಿ-1 ಎರಡು ಪುಟಗಳನ್ನು ಹೊಂದಿರುತ್ತದೆ ಅಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **02-02-2024**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.